## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರಂಜಾ ಯೋಜನೆ ನಿರ್ಮಾಣ ವಿಭಾಗ, ಬೀದರ್ ಅಧೀನದಲ್ಲಿರುವ ಚಂದ್ರಂಪಳ್ಳಿ ಯೋಜನಾ ಉಪ ವಿಭಾಗವನ್ನು ಬೆಣ್ಣೆತೊರ ಯೋಜನಾ ವಿಭಾಗ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ - ಆದೇಶ

******

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 263 ಸೇವಿಸು 2011, ಬೆಂಗಳೂರು, ದಿನಾಂಕ: 18-01-2012.**

**ಪ್ರಸ್ತಾವನೆ:**

ಚಂದ್ರಂಪಳ್ಳಿ ಯೋಜನಾ ಕಾಮಗಾರಿ ಹಾಗೂ ಸೌದಾಗರ್ ಯೋಜನಾ ಕಾಮಗಾರಿಗಳು ಪ್ರಸ್ತುತ ಕಾರಂಜಾ ಯೋಜನೆ ವಿಭಾಗ, ಬೀದರ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಯೋಜನೆಗಳನ್ನು ಈ ಹಿಂದೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ ಮುಲ್ಲಾಮರಿ ಯೋಜನಾ ವಿಭಾಗ, ಸುಲೇಪೇಟ್ ವಿಭಾಗ ವ್ಯಾಪ್ತಿಗೆ ಸೇರಿಸಲಾಗಿತ್ತು. ನಂತರ ಈ ಯೋಜನೆಯ ನಿರ್ವಹಣೆಗೆ ಕರ್ನಾಟಕ ನೀರಾವರಿ ನಿಗಮದಡಿ ಹಣಕಾಸು ಒದಗಿಸಿಕೊಳ್ಳಲು ಆಡಿಟ್ ಆಕ್ಷೇಪಣೆ ಇದ್ದುದರಿಂದ ಈ ಯೋಜನೆಗಳನ್ನು ಕಾರಂಜಾ ಯೋಜನಾ ನಿರ್ಮಾಣ ವಿಭಾಗ, ಬೀದರ್ ವ್ಯಾಪ್ತಿಗೆ ಸೇರಿಸಲಾಯಿತು. ಈಗ ಈ ಎರಡೂ ಯೋಜನೆಗಳು AIBP-ERM ಅಡಿ ಕೇಂದ್ರದ ಧನ ಸಹಾಯದಿಂದ ನಿರ್ವಹಿಸಲಾಗುತ್ತಿವೆ.

ಪ್ರಸ್ತುತ ಚಂದ್ರಂಪಳ್ಳಿ ಯೋಜನಾ ಕಾಮಗಾರಿ ಯೋಜನೆಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರಂಜಾ ಯೋಜನೆ ವಿಭಾಗ, ಬೀದರ್‌ನಿಂದ ಬೇರ್ಪಡಿಸಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಣ್ಣೆತೊರ ಯೋಜನಾ ನಿರ್ಮಾಣ ವಿಭಾಗ, ಗುಲ್ಬರ್ಗಾ ಇದರ ಆಡಳಿತ ಕಾರ್ಯವ್ಯಾಪ್ತಿಗೆ ಒಳಪಡಿಸಲು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕಾರಂಜಾ ಯೋಜನಾ ವಿಭಾಗ ಬೀದರ್ ಇದರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಂದ್ರಂಪಳ್ಳಿ ಯೋಜನಾ ಉಪ ವಿಭಾಗವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯ ಬೆಣ್ಣೆತೊರ ಯೋಜನಾ ನಿರ್ಮಾಣ ವಿಭಾಗ, ಗುಲ್ಬರ್ಗಾ ಇದರ ಆಡಳಿತ ಕಾರ್ಯವ್ಯಾಪ್ತಿಗೆ ಒಳಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ<br>ಮತ್ತು ಅವರ ಹೆಸರಿನಲ್ಲಿ,

(ವಿ.ನಾಗರಾಜಯ್ಯ)<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ)

ಇವರಿಗೆ:

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು-560001.
2. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು-560009.

**ಕರ್ನಾಟಕ ಸರ್ಕಾರ**

ಸಂ: ಜಸಂಇ 27 ಎಂಟಿಜಡ್ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:11/04/2012.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

**ಇವರಿಗೆ:**

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಬೆಂಗಳೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಸಂ 0381
12 APR 2012
ಬೆಂಗಳೂರು - 560 001.

**ಮಾನ್ಯರೇ,**

**ವಿಷಯಃ-** Release of Grant under the Accelerated Irrigation Benefits Programme (AIBP), during 2011-12 in respect of Chandrampalli Irrigation Project of Karnataka.

**ಉಲ್ಲೇಖ:-** ಪತ್ರ ಸಂಖ್ಯೆ:ಕನೀನಿನಿ/ನೀಯೋವ/ಮುಇಂಗು/ತಾಂಸ-3/ಸಇಂ-10/2011-12/5482 ದಿನಾಂಕ:27/3/2012.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ ರಡಿ ಚಂದ್ರಂಪಳ್ಳಿ ಯೋಜನೆ, ಹತ್ತಿಕುಣಿ ಯೋಜನೆ ಮತ್ತು ಮುಲ್ಲಾಮರಿ ಮೇಲ್ದಂಡೆ ಯೋಜನೆಗಳ ಆಧುನೀಕರಣ ಕಾಮಗಾರಿಗಳಿಗೆ ಕ್ರಮವಾಗಿ ರೂ.14.93 ಕೋಟಿಗಳು, ರೂ.6.75 ಕೋಟಿಗಳು ಮತ್ತು ರೂ.8.21 ಕೋಟಿಗಳನ್ನು ಕೇಂದ್ರ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

ಈ ಮೂರು ಯೋಜನೆಗಳ ಆಧುನೀಕರಣ ಕಾಮಗಾರಿಯನ್ನು ಎಐಬಿಪಿ ರಡಿ ಇ.ಆರ್.ಎಂ. ಕೇಂದ್ರ ಸಹಾಯಧನವನ್ನು ಪಡೆದುಕೊಳ್ಳಲು ಪ್ರಸ್ತಾವನೆಯನ್ನು ನಿಗಧಿತ ನಮೂನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಕೇಂದ್ರ ಸರ್ಕಾರದಡಿ ಹತ್ತಿಕುಣಿ ಮತ್ತು ಮುಲ್ಲಾಮರಿ ಮೇಲ್ದಂಡೆ ಯೋಜನೆಗಳ ಪ್ರಸ್ತಾವನೆಗಳನ್ನು ಕೇಂದ್ರ ಜಲ ಆಯೋಗದಿಂದ ಪರಿಶೀಲಿಸಿಕೊಂಡು ಕೇಂದ್ರ ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯ ಹಂತದಲ್ಲಿರುತ್ತದೆ. ಆದರೆ ಚಂದ್ರಂಪಳ್ಳಿ ಯೋಜನೆಗೆ ಸಂಬಂಧಿಸಿದಂತೆ ಯೋಜನೆಯ ಅಡಿ ಪೂರ್ತಿ ಅಚ್ಚುಕಟ್ಟು ಪ್ರದೇಶವು ಚಿಂಚೋಳಿ ತಾಲ್ಲೂಕಿನಡಿ ಬರುತ್ತಿದ್ದು ರಾಜ್ಯ ಸರ್ಕಾರವು ಚಿಂಚೋಳಿ ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿದ್ದು, ಅದರಂತೆ ಕೇಂದ್ರ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA NEERAVARI NIGAM LIMITED
(A Government of Karnataka Enterprise)

ಸಂ:ಕನೀನಿ:ನೀ.ಯೋ.ವ:ಚಂದ್ರಂಪಳ್ಳಿ:2012-13 / 0283 ದಿನಾಂಕ:20.04.2012

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
3ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು.

ಮಾನ್ಯರೇ,

**ವಿಷಯ:** **Release of Grant under the Accelerated Irrigation Benefits Programme (AIBP), during 2011-12 in respect of Chandrampalli Irrigation Project of Karnataka.**

**ಉಲ್ಲೇಖ:**
1. **ಸರ್ಕಾರದ ಪತ್ರ ಸಂ.ಜಸಂಇ ಎಂಟಿಜೆಡ್ 2009 ದಿನಾಂಕ:11.04.2012.**
2. **ಸರ್ಕಾರದ ಆದೇಶ ಸಂ.ಜಸಂಇ 263 ಸೇವಿಸು 2011, ಬೆಂಗಳೂರು ದಿನಾಂಕ:18.01.2012.**
3. **ಈ ಕಛೇರಿ ಪತ್ರ ಸಂ.240 ದಿನಾಂಕ:19.04.2012**

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3)ರ ಪತ್ರವನ್ನು ಮುಂದುವರೆಸುತ್ತಾ, ಈ ಕೆಳಗಿನಂತೆ ವರದಿಯನ್ನು ನೀಡಲಾಗಿದೆ.

ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ನಿರ್ದೇಶನದಂತೆ, ಚಂದ್ರಂಪಳ್ಳಿ ಯೋಜನೆಗೆ ಕೇಂದ್ರ ಸಹಾಯ ಧನ 90:10ರ ಬದಲಾಗಿ '25:75' ಅನುಪಾತದಂತೆ ನೀಡಬಹುದಾಗಿದ್ದು, ರಾಜ್ಯ ಸರ್ಕಾರದಿಂದ ಒಟ್ಟು ಅಂದಾಜು ಮೊತ್ತದ ರೂ.14.93 ಕೋಟಿಗಳ ಶೇ.75 ಅಂದರೆ ರೂ.11.20 ಕೋಟಿಗಳನ್ನು 2012-13ನೇ ಸಾಲಿನಲ್ಲಿ ನಿಗಮಕ್ಕೆ ನೀಡಿರುವ ಅನುದಾನದಲ್ಲಿ ಭರಿಸಲು ಹಂಚಿಕೆಮಾಡಲಾಗಿದೆ. ಈಗ ಚಂದ್ರಂಪಳ್ಳಿ ಯೋಜನೆ, ಹತ್ತಿಕುಣಿ ಯೋಜನೆ ಮತ್ತು ಮುಲ್ಲಾಮಾರಿ ಮೇಲ್ದಂಡೆ ಯೋಜನೆಗಳ ಆಧುನೀಕರಣ ಕಾಮಗಾರಿಗಳ ಪೈಕಿ ಚಂದ್ರಂಪಳ್ಳಿ ಯೋಜನೆಗೆ ಕೇಂದ್ರ ಧನ ಸಹಾಯ ಪಡೆಯಲು 2012-13ನೇ ಸಾಲಿಗೆ ರೂ.11.20 ಕೋಟಿಗಳನ್ನು ನಿಗಮಕ್ಕೆ ನೀಡಿರುವ ಅನುದಾನದಲ್ಲಿ ಹಂಚಿಕೆಮಾಡಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

20/04

ವ್ಯವಸ್ಥಾಪಕ ನಿರ್ದೇಶಕರು

*A Concern for Water*